**ವ್ಯಾಖ್ಯಾನ**

# <u>ಮೆಚ್ಚ ಮೆಚ್ಚನು ಕಾಣೋ</u>

ಉಗಾಭೋಗದ ಚಿಂತನೆ:

> **ಮೆಚ್ಚ ಮೆಚ್ಚನು ಕಾಣೋ ಎಂದೆಂದಿಗೂ**
>
> **ಒಡೆಯನುಳ್ಳ ತೊತ್ತಿಗ್ಯಾತರ ಚಿಂತೆ ?**
>
> **ಎನ್ನೊಡೆಯ ದ್ವಾರಕಾವಾಸ ಎಂಬೊ ಛತ್ರವಿರೆ**
>
> **ಇಂದೆಗೆಂಬುವ ಚಿಂತೆ, ನಾಳೆಗೆಂಬೊ ಚಿಂತೆ,**
>
> **ನಾಡಿದ್ದಿಗೆಂಬುವ ಚಿಂತೆ ಯಾತಕಯ್ಯ**
>
> **ಅಡಿಗಡಿಗೆ ನಮ್ಮೊಡನಿದ್ದು**
>
> **ಕಾವ ಭಕ್ತರೊಡೆಯ**
>
> **ಪುರಂದರ ವಿಠ್ಠಲನಿರಲಿಕ್ಕೆ**

**“ಅನನನ್ಯಾಶ್ಚಿಂತಯಂತೋಮಾಂ ಯೇಜನಾ: ಪರ್ಯುಪಾಸತೇ ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಮಂ ವಹಾಮ್ಯಹಂ"**

ಸ್ವತ: ಶ್ರೀ ಕೃಷ್ಣನೇ ಆಶ್ವಾಸನೆ ಇತ್ತಿದ್ದಾನೆ.

ಭಾಗವತರಾದವರು ಶ್ರೀಹರಿಯನ್ನು ಈ ರೀತಿ ಅಂದರೆ, ಪುರಂದರ ದಾಸರು ಈ ಉಗಾಭೋಗದಲ್ಲಿ ತಿಳಿಸಿದಂತೆ ನಂಬಿ ನಡೆಯುತ್ತಾರೆ.

ನಿಷ್ಕಾಮ ಕರ್ಮ ಮಾಡಿ ಭಗವದನುಗ್ರಹ ಪಡೆದು ಮೋಕ್ಷ ಹೊಂದುತ್ತಾರೆ.

**ತೊತ್ತಿಗ್ಯಾತರ ಚಿಂತೆ**, ಎಂದರೆ ಹೊಟ್ಟೆಗಿಲ್ಲವೆಂದು ಚಿಂತೆ ಯಾಕೆ?

ಅನ್ನದ, ಅನ್ನಾದ, ಅನ್ನ ಎಂದು ಶ್ರೀಹರಿಗೆ ಹೆಸರುಗಳೇ ಇವೆ.

ಜೀವರಿಗೆ ಅನ್ನವನ್ನು ಕೊಡುವವನಾಗಿ ಅನ್ನದ ಎನಿಸಿದರೆ,

ಜೀವರಲ್ಲಿ ನಿಂತು ಅನ್ನ ತಿನ್ನುವುದರಿಂದ ಅನ್ನಾದ ಎನಿಸಿಕೊಳ್ಳುತ್ತಾನೆ.

**"ಸ್ವಯಮನ್ನ ಬ್ರಹ್ಮಾದ್ಯಖಿಳ ಚೇತನಕೆ"** ಎನ್ನುತ್ತಾರೆ ಶ್ರೀ ಜಗನ್ನಾಥದಾಸರು.

**"ಕಲ್ಲೊಳಗೆ ಪುಟ್ಟಿತಾ ಕೂಗುವ ಕಪ್ಪೆಗೆ ಅಲ್ಲಲ್ಲಿ ಆಹಾರ ಇತ್ತವರು ಯಾರೋ ... "** ಎನ್ನುತ್ತಾರೆ ಶ್ರೀ ಕನಕದಾಸರು.

ಹುಟ್ಟಿಸಿದ ಸ್ವಾಮಿ,ಹೊಟ್ಟೆಗೆ ವ್ಯವಸ್ಥೆ ಮಾಡಿಯೇ ಇರುತ್ತಾನೆ.

ನಂಬಬೇಕು ಅಷ್ಟೇ.

ದೇವರನ್ನು ಇದೇ ರೀತಿ ನಂಬಿ ಭಾಗವತ ಧರ್ಮವನುಸರಿಸಿ ಬದುಕಿ ಸಾಧನೆಗೈದ ಮಹಾನುಭಾವರಾದ ಯಾದವಾರ್ಯರು ಮನೆಯಲ್ಲಿ ಊಟಕ್ಕಿಲ್ಲವೆಂದು ಒಂದು ಕ್ಷಣ ಅವನ ಮೇಲೆ ಬೇಸರಿಸಿಕೊಂಡರೆ, ತಕ್ಷಣ ತಾನೇ ದಿನಸಿ ಅಂಗಡಿಯವನ ವೇಷದಲ್ಲಿ ಬಂದು ಆಹಾರ ಸಾಮಗ್ರಿ ಕೊಟ್ಟು ಹೋಗುತ್ತಾನೆ.

ಇಂಥ ಅನುಭಾವಿಗಳ ಅನುಭವ ಬರೆದು ಮುಗಿಸಲಾಗದಷ್ಟಿವೆ.

**ದ್ವಾರಕಾವಾಸ ಎಂಬ ಛತ್ರುವಿರೆ** ಎಂದಿದ್ದಾರೆ ದಾಸರು.

ದ್ವಾರಕೆಯಲ್ಲಿ ಸಕಲರೂ ಕೃಷ್ಣನ ಕೃಪಾ ಛಾಯೆಯಲ್ಲಿ ಸಕಲ ಸಮೃದ್ಧಿ ಹೊಂದಿರಲಿಲ್ಲವೇ. ಹಾಗೇಯೇ ನಮ್ಮನ್ನೂ ರಕ್ಷಿಸುತ್ತಾನೆ.

**ದ್ವಾರಕಾ** – **'ಕ'** ಎಂದರೆ ಸುಖ,

ಸುಖಕ್ಕೆ '**ದ್ವಾರ**'ವೆನಿಸುವ ವೈಕುಂಠವನ್ನೇ ಕೊಡುವ ಸಾಮರ್ಥ್ಯ ಉಳ್ಳವನಿಗೆ ಲೌಕಿಕದಲ್ಲಿ ಹೊಟ್ಟೆ ತುಂಬಿಸುವುದೇನಸಾಧ್ಯ, ಎನ್ನುವ ಭಾವವಿದೆ.

**"ಸುಲಭನೋ ಹರಿ ತನ್ನವರನರಘಳಿಗೆ ಬಿಟ್ಟಗಲನು ..... "**

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ